# ಹಾಲಿ ಪಡಿತರ ಚೀಟಿ ಬದಲಾವಣೆಗಳಿಗೆ ಪ.ಚೀಟಿದಾರರು ಅನುಸರಿಸಲು ಕಾರ್ಯವಿಧಾನ

ಹಾಲಿ ಇರುವ ಪಡಿತರ ಚೀಟಿಯಲ್ಲಿನ ಯಾವುದೇ ಬದಲಾವಣೆಗಾಗಿ

ಹತ್ತಿರದ ಯಾವುದೇ ಬಯೋ-ಫೋಟೋ ಸೇವಾ ಕೇಂದ್ರಕ್ಕೆ ಹೋಗಿ ನಿಮ್ಮ ಪ.ಚೀ.ಯ ಸ್ಥಿತಿಯನ್ನು ಪರಿಶೀಲಿಸಿ (ಗ್ರಾಮಾಂತರ ಪ್ರದೇಶದವರು ಅವರ ಗ್ರಾಮ ಪಂಚಾಯಿತಿ ಕಛೇರಿಗೆ ಹೋಗುವುದು.)

ನಿಮ್ಮ ಪ.ಚೀ.ರದ್ದಾಗಿದ್ದಲ್ಲಿ, ಯಾವುದೇ ಬದಲಾವಣೆಗೆ ಅವಕಾಶವಿಲ್ಲ., ನೀವು ಹೊಸ ಪ.ಚೀ.ಗಾಗಿ ಆನ್ ಲೈನ್ ಅರ್ಜಿ ಸಲ್ಲಿಸಬೇಕು.

ನಿಮ್ಮ ಪಡಿತರ ಚೀಟಿ ಚಾಲ್ತಿಯಲ್ಲಿದ್ದಲ್ಲಿ ತಮಗೆ ಈ ಕೆಳಗಿನ ಯಾವುದೇ ಬದಲಾವಣೆಗೆ ಅವಕಾಶವಿದೆ.

ವಿಳಾಸ ಬದಲಾವಣೆ, ಸದಸ್ಯರ ಹೆಸರು ಸೇರ್ಪಡೆ/ಬೇರ್ಪಡೆ, ಫೋಟೋ ಮತ್ತು ಬಯೋಮೆಟ್ರಿಕ್ ಸೇರಿಸುವುದು,ಸದಸ್ಯರ ವಿವರದಲ್ಲಿ ಯಾವುದೇ ತಿದ್ದುಪಡಿ- --ಇವುಗಳ ಅಗತ್ಯವಿದ್ದಲ್ಲಿ

ತಾವು ಈಗ ವಾಸಿಸುವ ಮನೆಯ ಇತ್ತೀಚಿನ ವಿದ್ಯುತ್ ಬಿಲ್ಲು ಮತ್ತು ಅಗತ್ಯ ಬದಲಾವಣೆಗಾಗಿ ಹೋಲಿಕೆ ದಾಖಲೆಗಳೊಂದಿಗೆ ಸೇವಾಕೇಂದ್ರದಲ್ಲಿಯೇ ಬದಲಾವಣೆಗಳನ್ನು ಮಾಡಿಸಿಕೊಂಡು ಕಂಪ್ಯೂಟರ್ ಮುದ್ರಿತ ಸ್ವೀಕೃತಿಯನ್ನು ಪಡೆಯಿರಿ.

ಈ ರೀತಿ ಬದಲಾಯಿಸುವಾಗ ನಿಮ್ಮ ಪ.ಚೀ."ತಾತ್ಕಾಲಿಕ"ವೇ ಅಥವಾ "ಖಾಯಂ" ಪ.ಚೀ.ಯೇ ಎಂದು ತಿಳಿದುಕೊಳ್ಳಿ.

- ಖಾಯಂ ಪ.ಚೀ.ಯಾಗಿದ್ದಲ್ಲಿ ತಿದ್ದುಪಡಿಗಳ ನಂತರ ಸೇವಾ ಕೇಂದ್ರದಲ್ಲಿ ಪಡೆದ ಸ್ವೀಕೃತಿ ಮತ್ತು ಹಾಲಿ ಪ.ಚೀ.ಯೊಂದಿಗೆ ಆಹಾರ ಕಛೇರಿಗೆ ಕುಟುಂಬದ ಮುಖ್ಯಸ್ಥರು ಹೋಗಿ ಪರಿಷ್ಕೃತ ಪ.ಚೀ. ಪಡೆಯಿರಿ.
- ತಾತ್ಕಾಲಿಕ ಪ.ಚೀ.ಯಾಗಿದ್ದಲ್ಲಿ, ಆಹಾರ ಕಛೇರಿಯಿಂದಲೇ ಪ.ಚೀ.ಪಡೆದುಕೊಳ್ಳಲು ತಿಳಿಸಿ ನಿಮಗೆ ಎಸ್.ಎಮ್.ಎಸ್. ಮೂಲಕ ಸಂದೇಶ ಬರುವವರೆಗೂ ಕಾಯುವುದು.

ತಾತ್ಕಾಲಿಕ ಪ.ಚೀ.ಹೊಂದಿರುವವರು ಖಾಯಂ ಪ.ಚೀ.ಪಡೆಯಲು SMS ಸಂದೇಶ ಬಂದ ನಂತರ ಕುಟುಂಬದ ಮುಖ್ಯಸ್ಥರು ಮಾತ್ರ ಈಗ ನಿಮ್ಮ ಬಳಿ ಇರುವ ಪ.ಚೀ.ಯೊಂದಿಗೆ ಕಛೇರಿಗೆ ಹೋಗಿ, ನಿಮ್ಮ ಬಯೋಮೆಟ್ರಿಕ್ ಹೊಂದಾಣಿಕೆ ಮಾಡಿ, ಈಗಿನ ಪ.ಚೀ.ವಾಪಸು ನೀಡಿ, ಹೊಸ ಪ.ಚೀ. ಶುಲ್ಕ ರೂ.20 ಪಾವತಿಸಿ ಹೊಸ ಪರಿಸ್ಕೃತ ಪ.ಚೀ.ಪಡೆಯುವಿರಿ.

**ನಿಮ್ಮ ಕುಟುಂಬವು ಈಗಿರುವ ತಾಲ್ಲೂಕು/ವಲಯದಿಂದ ಬೇರೆ ತಾಲ್ಲೂಕು/ವಲಯಕ್ಕೆ ವರ್ಗಾವಣೆಯಾಗಬೇಕಿದ್ದಲ್ಲಿ ಪ.ಚೀ.ಯನ್ನು ವರ್ಗಾಯಿಸುವ ವಿಧಾನ:**

ನಿಮ್ಮದು ಹಾಲಿ ಚಾಲ್ತಿಯಲ್ಲಿರುವ ಪ.ಚೀ.ಯಾಗಿರಬೇಕು.

ನಿಮ್ಮ ಪ.ಚೀ.ವಿತರಣೆಯಾಗಿರುವ ಆಹಾರ ಕಛೇರಿಗೆ ಭೇಟಿ ನೀಡಿ, ಹಾಲಿ ಪ.ಚೀ.ಯೊಂದಿಗೆ ವರ್ಗಾವಣೆಗಾಗಿ ಕೋರಿಕೆ ಸಲ್ಲಿಸಿ, ಆನ್ ಲೈನ್ ವರ್ಗಾನಣೆ ಸ್ಥಳದಲ್ಲೇ ಮಾಡಿಸಿ, ಸರೆಂಡರ್ ಸರ್ಟಿಫಿಕೇಟ್ ಪಡೆಯಿರಿ. ವರ್ಗಾವಣೆಯಾಗಿ ಹೋಗುವ ತಾಲ್ಲೂಕು ಮತ್ತು ಜಿಲ್ಲೆಯ ಹೆಸರನ್ನು ತಪ್ಪಿಲ್ಲದೇ ತಿಳಿಸುವುದು ಕಡ್ಡಾಯ.

ಸರೆಂಡರ್ ಸರ್ಟಿಫಿಕೇಟ್ ನೊಂದಿಗೆ ನೀವೀಗ ವಾಸವಿರುವ ಹೊಸ ತಾಲ್ಲೂಕು/ವಲಯ ವ್ಯಾಪ್ತಿಯ ಯಾವುದೇ "ಸೇವಾಕೇಂದ್ರ"ಕ್ಕೆ ಹೋಗಿ , ನಿಮ್ಮ ಮೊಬೈಲ್ ನಂಬರ್, ಮನೆಯ ವಿದ್ಯುತ್ ಆರ್.ಆರ್. ನಂಬರ್, ಅಡಿಗೆ ಅನಿಲ ವಿವರಗಳೊಂದಿಗೆ ನಿಮ್ಮ ಪ.ಚೀ.ಯ ವಿವರ ತೆರೆದು, ಅದರಲ್ಲಿ ಈಗಿನ ವಿಳಾಸ, ಕುಟುಂಬದ ಸದಸ್ಯರ ವಿವರ, ಫೋಟೋ,ಬಯೋಮೆಟ್ರಿಕ್ , ಇತ್ಯಾದಿ ವಿವರಗಳನ್ನು ಪರಿಶೀಲಿಸಿ, ಅಗತ್ಯವಿದ್ದಲ್ಲಿ ತಿದ್ದುಪಡಿಗಳನ್ನು ಮಾಡಿಸಿ ಆನ್ ಲೈನ್ ಅಪ್ ಲೋಡ್ ಮಾಡಿಸಿ. ಹಾಗೂ ಈ ಬಗ್ಗೆ ಕಂಪ್ಯೂಟರ್ ಮುದ್ರಿತ ಸ್ವೀಕೃತಿ ಪಡೆಯಿರಿ.

ಸ್ವೀಕೃತಿಯೊಂದಿಗೆ ಸಂಬಂಧಪಟ್ಟ ಆಹಾರ ಕಛೇರಿಗೆ ಭೇಟಿ ನೀಡಿ, ಹೊಸ ಪ.ಚೀ.ಪಡೆಯಿರಿ.

ವಿ.ಸೂ.: 1) ಹೊರ ರಾಜ್ಯದಿಂದ ಸರೆಂಡರ್ ಅಥವಾ ಡಿಲಿಷನ್ ಪತ್ರ ಪಡೆದವರು ಹೊಸ ಪ.ಚೀ.ಗಾಗಿ ಆನ್ ಅರ್ಜಿಯನ್ನೇ ಸಲ್ಲಿಸಬೇಕು.

2) ಪಡಿತರ ಚೀಟಿದಾರರ ಬಳಿ ಇರುವುದು ತಾತ್ಕಾಲಿಕ ಪಡಿತರ ಚೀಟಿ ಆಗಿದ್ದಲ್ಲಿ, ಅದನ್ನು ಖಾಯಂ ಗೊಳಿಸಿದ ನಂತರವೇ ವರ್ಗಾವಣೆ ಮಾಡಿಕೊಳ್ಳಲು ಅವಕಾಶವಿರುತ್ತದೆ.